ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ 45 ಕೆರೆಗಳು ಇರುತ್ತವೆ. ಬಹುತೇಕ ಕೆರೆಗಳಲ್ಲಿ ಹೂಳು ತುಂಬಿದ್ದು, ಪ್ರತ್ಯೇಕವಾಗಿ ಸರ್ವೆ ಸಮೀಕ್ಷೆ ಮಾಡಿದ ನಂತರವೇ ಅಧಿಕ ಹೂಳು ತುಂಬಿರುವ ಕೆರೆಗಳನ್ನು ಗುರುತಿಸಬಹುದಾಗಿದೆ.

ಆ) ಈ ಬಗ್ಗೆ ಇದುವರೆವಿಗೂ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ಕೆರೆಗಳ ಹೂಳೆತ್ತುವ ಕೆಲಸವು ಒಂದು ಬೃಹತ್ ಕಾರ್ಯವಾಗಿದ್ದು, ಇದನ್ನು ಹಂತ ಹಂತವಾಗಿಯೇ ಕೈಗೊಳ್ಳಬೇಕಾಗುತ್ತದೆ. ರೈತ ಕಾಯಕ ಕೆರೆ ಯೋಜನೆಯಡಿಯಲ್ಲಿ ಕೊರಟಗೆರೆ ತಾಲ್ಲೂಕಿಗೆ ಸೇರಿದ 4 ಕೆರೆಗಳ ಸಮಗ್ರ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಈ ಪೈಕಿ ಹೊಳವನಹಳ್ಳಿ ಹೋಬಳಿಯ ಅಕ್ಕಿರಾಂಪುರ ಕೆರೆಯ ಕೆಲಸವು ಪ್ರಥಮ ಹಂತವಾಗಿ ಈಗಾಗಲೇ ಪ್ರಾರಂಭವಾಗಿದೆ. ಮುಂದಿನ ಹಂತಗಳಲ್ಲಿ ಉಳಿದ ಕೆರೆಗಳ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ನಿವೇಶನ ನಂ. 490-18ನೇ ಅಡ್ಡರಸ್ತೆ ಪ್ರಕಾಶ್‌ನಗರ ಬೆಂಗಳೂರು ಇದರ ಮಾಲೀಕರು ಮೂರು ತಿಂಗಳ ಹಿಂದೆಯೇ ವಿದ್ಯುತ್ ಮೀಟರ್ ಅಳವಡಿಕೆಗೆ ಹಣ ಸಂದಾಯ ಮಾಡಿದ್ದರೂ ಮೀಟರ್ ಅಳವಡಿಸದೆ ಇರುವುದು

780(815) ಶ್ರೀ ಚನ್ನಿಗಪ್ಪ. ಸಿ. (ಕೊರಟಗೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಿವೇಶನ ನಂ. 490-1- 8ನೇ ಅಡ್ಡರಸ್ತೆ, ಪ್ರಕಾಶನಗರ, ಬೆಂಗಳೂರು ಇದರ ಮಾಲೀಕರು ಸುಮಾರು ಮೂರು ತಿಂಗಳ ಹಿಂದೆಯೇ ವಿದ್ಯುತ್ ನಿಗಮಕ್ಕೆ ವಿದ್ಯುತ್ ಮೀಟರ್ ಅಳವಡಿಸಲು ಈಗಾಗಲೇ ರೂ. 11.500.00 ಠೇವಣಿಯ ಹಣವನ್ನು ಸಂದಾಯ ಮಾಡಿದ್ದರೂ ಇದುವರೆವಿಗೂ ವಿದ್ಯುತ್ ಮೀಟರ್ ಅಳವಡಿಸದೇ ಇರುವುದು ನಿಜವಲ್ಲವೇ?

ಆ) ವಿದ್ಯುತ್ ನಿಗಮದಲ್ಲಿ ವಿದ್ಯುತ್ ಮೀಟರ್ ಇಲ್ಲದಿದ್ದರೆ, ಮೀಟರಿಗೆ ಗ್ರಾಹಕರಿಂದ ಹಣವನ್ನು ಪಡೆಯದೇ ಮೀಟರಿನ ಹಣವನ್ನು ಸಂದಾಯ ಮಾಡದಂತೆ ಅಧಿಕಾರಿಗಳು ಸೂಚನೆ ನೀಡದೇ ಇರುವುದು ತಪ್ಪಲ್ಲವೇ?

ಇ) ಹಾಗಿದ್ದರೆ ಇಂತಹ ಅಧಿಕಾರಿಗಳ ವಿರುದ್ಧ ಸರ್ಕಾರವು, ನಿಗಮವು ಕೈಗೊಳ್ಳುವ ಕ್ರಮವೇನು?

ಈ) ಮೀಟರ್ ಠೇವಣಿಯ ಹಣವನ್ನು ಸಂದಾಯ ಮಾಡಿಸಿಕೊಂಡು ಮೂರು ತಿಂಗಳಿಂದ ವಿದ್ಯುತ್ ಮೀಟರನ್ನು ಅಳವಡಿಸದೇ ಇರುವ ಅಧಿಕಾರಿಗಳಿಗೆ ಕೂಡಲೇ ಸೂಚನೆ ನೀಡಿ ವಿದ್ಯುತ್ ಮೀಟರ್ ಅನ್ನು ಅಳವಡಿಸಿಕೊಡುವ ವ್ಯವಸ್ಥೆ ಮಾಡುವುದು ಯಾವಾಗ?

ಉ) ಬೇಜವಾಬ್ದಾರಿಯ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಶಿಸ್ತು ಕ್ರಮವೇನು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ನಿವೇಶನ ಸಂಖ್ಯೆ 490-1, 2ನೇ ಅಡ್ಡರಸ್ತೆ, ಪ್ರಕಾಶನಗರ ಇದರ ಮಾಲೀಕರಾದ ಶ್ರೀಮತಿ ಜಯಮ್ಮನವರು ಅಧಿಕ ವಿದ್ಯುತ್‌ಗೆ ಮತ್ತು 1 ಹೊಸ ವಾಣಿಜ್ಯ ಸಂಪರ್ಕಕ್ಕಾಗಿ ಸಲ್ಲಿಸಿದ್ದ ಅರ್ಜಿಯ ಮೇರೆಗೆ ಕಂಪೆನಿಯ ನಿಯಮದ ಪ್ರಕಾರ ಠೇವಣಿ ಹಾಗೂ ಶುಲ್ಕಗಳನ್ನು

ಕಟ್ಟಿಸಿಕೊಂಡು 26.12.2002ರಂದು ಉಪ ವಿಭಾಗಾಧಿಕಾರಿಗಳಿಂದ ಕಾರ್ಯಾದೇಶವನ್ನು ಕೊಟ್ಟಿರುತ್ತಾರೆ. ಇದಕ್ಕೆ ಬೇಕಾದ ಮಾಪಕವು ಅವರಲ್ಲಿ ಇಲ್ಲವಾದ್ದರಿಂದ, ಈ ಸ್ಥಾವರಕ್ಕೆ ಸಂಪರ್ಕ ಕೊಡುವುದರಲ್ಲಿ ವಿಳಂಬವಾಗಿದೆ. ಈಗಿನ ನಿಯಮಾವಳಿಯ ಪ್ರಕಾರ, ಗ್ರಾಹಕರು ಖರೀದಿಸಿ ತಂದಿರುವ ಮಾಪಕವನ್ನು ಅಳವಡಿಸಿ 25.2.2003ರಂದು ಸರ್ವೀಸ್ ಮಾಡಲಾಗಿದೆ (ಸಿ1 ಎಲ್‌ಜಿ - 23378)

ಆ) ಕಂಪೆನಿಯು ಮೀಟರ್ ಇಲ್ಲದ ಸಂದರ್ಭದಲ್ಲಿ ಹಣವನ್ನು ಪಡೆಯದೆ, ಗ್ರಾಹಕರೇ ಮೀಟರನ್ನು ಖರೀದಿಸುವ ಅವಕಾಶ ಜನವರಿಯಿಂದೀಚೆಗೆ ಜಾರಿಗೆ ಬಂದಿದ್ದು, ಈ ಗ್ರಾಹಕರು ಅರ್ಜಿ ಸಲ್ಲಿಸಿದಾಗ ಇದಕ್ಕೆ ಅವಕಾಶ ಇಲ್ಲದಿದ್ದರಿಂದ ಮಾಪಕ ಠೇವಣಿ ಕಟ್ಟಲು ಸೂಚಿಸಲಾಗಿತ್ತು. ಈಗಾಗಲೇ ಪಾವತಿಸಿರುವ ಈ ಮೊಬಲಗನ್ನು ಗ್ರಾಹಕರು ಸ್ಥಾವರದ ಮಾಸಿಕ ಬಿಲ್ಲುಗಳಿಗೆ ಸರಿದೂಗಿಸಲಾಗುವುದು.

ಇ) ಗ್ರಾಹಕರು ಅರ್ಜಿ ಸಲ್ಲಿಸಿದ್ದ ವೇಳೆಯಲ್ಲಿ ಇದ್ದ ನಿಯಮದ ರೀತ್ಯಾ ಉಪ ವಿಭಾಗಾಧಿಕಾರಿಯವರು ಕ್ರಮ ತೆಗೆದುಕೊಂಡಿರುವುದರಿಂದ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಸ್ತಾಪವಿರುವುದಿಲ್ಲ.

ಈ) ಸದಸ್ಯದಲ್ಲಿರುವ ವ್ಯವಸ್ಥೆಯ ಪ್ರಕಾರ, ಮೀಟರ್ ಠೇವಣಿ ಕಟ್ಟಿಸಿಕೊಳ್ಳದೆ, ಅರ್ಜಿದಾರರೇ ಮಾಪಕಗಳನ್ನು ಖರೀದಿಸುವಂತೆ ಸೂಚನೆ ಕೊಡಲು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಉ) ಗ್ರಾಹಕರು ಅರ್ಜಿ ಸಲ್ಲಿಸಿದ್ದ ವೇಳೆಯಲ್ಲಿ ಇದ್ದ ನಿಯಮದ ರೀತ್ಯಾ ಉಪವಿಭಾಗಾಧಿಕಾರಿಯವರು ಕ್ರಮ ತೆಗೆದುಕೊಂಡಿರುವುದರಿಂದ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಸ್ತಾಪವಿರುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಕೊರತೆ

781(816) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರದಿಂದ ಯಾವ ಪ್ರಮಾಣದಲ್ಲಿ ವಿದ್ಯುತ್ ಖರೀದಿ ಮಾಡಿ ಲೋಡ್ ಶೆಡ್ಡಿಂಗ್ ಇಳಿಸಲಾಗಿದೆ; ಒಂದು ಯೂನಿಟ್‌ಗೆ ರಾಜ್ಯವು ಹೊರ ರಾಜ್ಯದವರಿಗೆ ನೀಡುತ್ತಿರುವ ದರ ಎಷ್ಟು;

ಆ) ಈಗ ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣವೇನು;

ಇ) ವಿದ್ಯುತ್ ದರವನ್ನು ಹೆಚ್ಚಿಗೆ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ?

ಈ) ಕಳ್ಳತನದಲ್ಲಿ ವಿದ್ಯುತ್ ಕದಿಯುತ್ತಿರುವ ಕಾರ್ಖಾನೆಯ ಮಾಲೀಕರ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಪ್ರಸ್ತುತ ರಾಜ್ಯವು ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರದಿಂದ ವಿದ್ಯುತ್ ಪಡೆಯುತ್ತಿಲ್ಲ. ಪೂರ್ವ ವಲಯದಿಂದ ವಿದ್ಯುತ್ತನ್ನು ಪಡೆಯುತ್ತಿವೆ. ಜನವರಿ 2003ರಲ್ಲಿ ದಿನವಹಿ ಸರಾಸರಿ 5.9 ದಶಲಕ್ಷ ಯೂನಿಟ್ಟುಗಳನ್ನು ಹಾಗೂ ಫೆಬ್ರವರಿ 2003ರಲ್ಲಿ ದಿನವಹಿ ಸರಾಸರಿ